ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ. 355/2019

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರೇಮ ಸಿಂಗ್ | ಪಿ.ಡಬ್ಲ್ಯೂ–4 |
| ತಂದೆಯ ಹೆಸರು | ಓಮನ್ ಸಿಂಗ್ | ಸಿ.ಡಬ್ಲ್ಯೂ–4 |
| ವಯಸ್ಸು | 48 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ವಕೀಲರು | ದಿನಾಂಕಃ |
| ವಾಸಃ | ಸಾಗರ | 06.12.2023 |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ನಾನು ಕಳೆದ 20 ವರ್ಷಗಳಿಂದ ಸಾಗರದ ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ದಿಃ 19.12.2018 ರಂದು ಬೆಳಗ್ಗೆ 11 ಗಂಟೆಗೆ ನಾನು ಎಂದಿನಂತೆ ನ್ಯಾಯಾಲಯಕ್ಕೆ ಬರುತ್ತಿದ್ದಾಗ ಪ್ರಧಾನ ವ್ಯವಹಾರ ನ್ಯಾಯಾಲಯದ ಕಚೇರಿಯ ಎದುರು ಚಾಸಾ 1 ಮತ್ತು 2 ರವರು ನಿಂತಿದ್ದರು, ಆ ಸಮಯದಲ್ಲಿ ಆರೋಪಿತ ಅಲ್ಲಿಗೆ ಬಂದಿದ್ದ, ಅವನಿಗೆ ಚಾಸಾ 1 ಚೆಕ್ಕಿನ ಮೊತ್ತ 25 ಲಕ್ಷ ರೂಪಾಯಿ ಕೊಡುವಂತೆ ಕೇಳಿರುತ್ತಾನೆ. ಅದಕ್ಕೆ ಆರೋಪಿತ ಚಾಸಾ 1 ರವರಿಗೆ ಸಂಜೆ ಮನೆಗೆ ಬರುವಂತೆ ಅವರಿಗೆ ತಿಳಿಸಿದ್ದ. ಆ ಪ್ರಕಾರ ಚಾಸಾ 1 ಮತ್ತು 2 ರವರು ಆ ದಿವಸ ಸಂಜೆ 5 ಗಂಟೆಗೆ ಆರೋಪಿತನ ಮನೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ಆರೋಪಿತನ ಮತ್ತು ಚಾಸಾ 1 ರವರ ಮಧ್ಯೆ ಮಾತಿಗೆ ಮಾತು ಬೆಳೆದು ಗಲಾಟೆಯಾಗಿರುತ್ತದೆ ಎಂದು ನನಗೆ ಚಾಸಾ 1 ರವರು ತಿಳಿಸಿರುತ್ತಾರೆ. ಈ ಬಗ್ಗೆ ನಾನು ದಿಃ 25.12.2018 ರಂದು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ . ಆ ದಿವಸ ನ್ಯಾಯಾಲಯಕ್ಕೆ ಬಂದಿದ್ದ ಆರೋಪಿತನನ್ನು ನೋಡಿದರೆ ಗುರುತಿಸಬಲ್ಲೆ, ಅವನು ಈ ದಿವಸ ನ್ಯಾಯಾಲಯದಲ್ಲಿ ಹಾಜರಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ .ಕೆ.ಎನ್.ಎಸ್. ರವರಿಂದಃ</u>

ನಾನು ಚಾಸಾ 1 ರವರ ವಕೀಲನಾಗಿರುತ್ತೇನೆಂದರೆ ಸರಿ. ಈ ಪ್ರಕರಣದಲ್ಲಿ ಚಾಸಾ 1 ರವರು ಏನು ದಾುರು ಕೊಟ್ಟಿದ್ದಾರೆಂದು ನನಗೆ ಗೊತ್ತಿದೆ, ದೂರನ್ನು ನಾನು ಬರೆದುಕೊಟ್ಟಿಲ್ಲ, ನಾನು ಹೇಳಿದ ದಿನಾಂಕದಂದು ಚಾಸಾ 1 ದೂರನ್ನು ದಾಖಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದ ಹೇಳಿಕೆಯಲ್ಲಿ ಚಾಸಾ 1 ಆರೋಪಿನತನಿಗೆ ಚೆಕ್ಕಿನ ಮೊತ್ತ 25 ಲಕ್ಷ ರೂಪಾಯಿ ಕೇಳಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಾನು ಓದಿ ನೋಡಿರುತ್ತೇನೆ. ಸಾಕ್ಷಿ ತನ್ನ ಹೇಳಿಕೆಯನ್ನು ನೋಡಿ ಅದರಲ್ಲಿ 25 ಲಕ್ಷ ಹಣ ಕೇಳಿದ ಬಗ್ಗೆ ನಮೂದು ಇಲ್ಲ ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯದ ಮುಂದೆ ಹೇಳಿದ ಹೇಳಿಕೆಗೂ ಮತ್ತು ಪೊಲೀಸರ ಮುಂದೆ ಹೇಳಿರುವ ಹೇಳಿಕೆಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಿಃ 19.02.2018 ರಂದು ಆರೋಪಿತ ನ್ಯಾಯಾಲಯಕ್ಕೆ ಬಂದಿರಲಿಲ್ಲ ಮತ್ತು ಅವನಿಗೆ ಚಾಸಾ 1 ಮತ್ತು 2 ರವರು ಹಣ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ದಿವಸ ಆರೋಪಿತನ ಮನೆಗೆ ಹೋಗಿರಲಿಲ್ಲ. ಆರೋಪಿತನ ಮನೆಯಲ್ಲಿ ಗಲಾಟೆಯಾಗಿದೆ ಎಂದು ಚಾಸಾ 1 ರವರು ನನಗೆ ಅದೇ ದಿವಸ ತಿಳಿಸಿರುತ್ತಾರೆ. ಆ ದಿವಸ ಚಾಸಾ 1 ಮತ್ತು 2 ಆರೋಪಿತರ ಮನೆಗೆ ಹೋಗಿರಲಿಲ್ಲ ಮತ್ತು ಗಲಾಟೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಂದ ಹಣ ವಸೂಲಿ ಮಾಡಲು ನಾನು ನೀಡಿದ ಸಲಹೆ ಮೇರೆಗೆ ಪಿರ್ಯಾದಿಯನ್ನು ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆದಿಲ್ಲ ಮತ್ತು ಚಾಸಾ 1 ರವರು ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ